**ಸಾಕ್ಷಿಗೆ ದಿನಾಂಕ 25.06.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**

1. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ. NMP ವಕೀಲರಿಂದಃ**

2. ಅಪಘಾತದ ಕುರಿತು ದೂರನ್ನು ನಾನೇ ನೀಡಿರುತ್ತೇನೆ. ದೂರನ್ನು ಅಪಘಾತವಾದ 2ದಿನಗಳ ನಂತರ ನೀಡಿರುತ್ತೇನೆ. ಅಪಘಾತದ ಕುರಿತು ನಾಗಪ್ಪ ಎನ್ನುವವರು ತಿಳಿಸಿರುತ್ತಾರೆ. ಆಸ್ಪತ್ರೆಯಿಂದ ಬಂದು ನಾಗಪ್ಪ ರವರು ಅಪಘಾತದ ಕುರಿತು ಹೇಳಿರುತ್ತಾರೆ. ನಾಗಪ್ಪ ರವರಿಗೆ ಆಸ್ಪತ್ರೆಯಲ್ಲಿದ್ದ ನಮ್ಮ ಜನ ಅಪಘಾತದ ಬಗ್ಗೆ ಮಾಹಿತಿ ನೀಡಿರುತ್ತಾರೆ. ನನ್ನ ಮೃತ ಪತ್ನಿಯನ್ನು ಆಸ್ಪತ್ರೆಗೆ ಸಾರ್ವಜನಿಕರು ಕರೆದುಕೊಂಡುಹೋಗಿರುತ್ತಾರೆ. ನನ್ನ ಮಗ ಮಹೇಶ ಆ ದಿನ ಆಸ್ಪತ್ರೆಯಲ್ಲಿ ಇದ್ದರು. ನನ್ನ ಮಗ ಮಹೇಶ ಆ ದಿನ ಯಾವ ವಾಹನದಲ್ಲಿ ಹೋಗುತ್ತಿದ್ದನು ಎಂಬ ವಿಷಯವನ್ನು ತಿಳಿಸಿರುತ್ತಾರೆ. ಆಸ್ಪತ್ರೆಯಲ್ಲಿದ್ದ ನಮ್ಮ ಜನರಿಗೆ ಅಪಘಾತದ ಬಗ್ಗೆ ಮಾಹಿತಿಯನ್ನು ನನ್ನ ಮಗ ನೀಡಿರುತ್ತಾನೆ. ಅಪಘಾತದ ಬಗ್ಗೆ ನನಗೆ ಜನರು ವಿಷಯ ಹೇಳಿದ ನಂತರ ನಾನು ದೂರು ನೀಡಿರುತ್ತೇನೆ ಎಂದರೆ ಸರಿ.

3. ನಿ.ಪಿ.1 ಮತ್ತು 2 ಸರಿಯಾಗಿದೆ ಎಂದರೆ ಸರಿ. ನನ್ನ ಮಗ ಸಿದ್ದೇಶ ಪೊಲೀಸರ ಮುಂದೆ ವಾಹನದ ಸಂಖ್ಯೆಯ ಕುರಿತು ನೀಡಿರುವ ಹೇಳಿಕೆಯು ಸರಿಯಾಗಿರುತ್ತದೆ ಎಂದರೆ ಸರಿ. ನಿ.ಪಿ.9-ಶವ ತನಿಖಾ ವರದಿಯಲ್ಲಿ ನಮೂದಾಗಿರುವ ವಾಹನದ ಸಂಖ್ಯೆ ಸರಿಯಾಗಿರುತ್ತದೆ ಎಂದರೆ ಸರಿ. ಸದರಿ

ವರದಿಯನ್ನು ಅಪಘಾತವಾದ 25 ದಿನಗಳ ನಂತರ ತಯಾರಿಸಲಾಗಿರುತ್ತದೆ ಎಂದರೆ ಸರಿ. ಅಪಘಾತದಲ್ಲಿ ಭಾಗಿಯಾಗಿರುವ ವಾಹನದ ಬಗ್ಗೆ ಮತ್ತು ಹೇಗೆ ಅಪಘಾತವಾಯಿತು ಎಂದು ವಿಚಾರಿಸಿ ದೂರು ನೀಡಿರುತ್ತೇನೆ ಎಂದರೆ ಸರಿ.

4. ಅಪಘಾತದ ನಂತರ ನನ್ನ ಪತ್ನಿಯನ್ನು ಕೌಲಂದೆ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ ಅಪಘಾತದ ಬಗ್ಗೆ ಮಾಹಿತಿ ನೀಡಿರುತ್ತೇವೆ. ಈ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಲ್ಲೆನು. ಗಾಯಾಳು ನನ್ನ ಪತ್ನಿ ಮೃತಪಟ್ಟ ಬಗ್ಗೆ ಪೊಲೀಸರಿಗೆ ನಿ.ಪಿ.3ರಂತೆ ಮಾಹಿತಿ ನೀಡಿದ್ದು ನಿ.ಪಿ.4ರಂತೆ ಪೊಲೀಸರು ನ್ಯಾಯಾಲಯಕ್ಕೆ ಮನವಿ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿ. 1ನೇ ಎದುರುದಾರರ ವಾಹನ ಅಪಘಾತದಲ್ಲಿ ಭಾಗಿಯಾಗದೇ ಇರುವ ಕಾರಣ ದೂರು, ಶವ ತನಿಖಾ ವರದಿಯಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಪ್ರತ್ಯಕ್ಷದರ್ಶಿ ಸಾಕ್ಷಿಯನ್ನು ಕರೆಸಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಸಬಲ್ಲಿರಾ ಎಂದರೆ ಅವರು ಬರುವುದಿಲ್ಲ.

5. KA-09-JH-0685 ವಾಹನದಿಂದ ಅಪಘಾತವಾಗಿಲ್ಲ KA-09-JK-1327 ವಾಹನದಿಂದ ಅಪಘಾತವಾಗಿದೆ ಈ ಕಾರಣ ಪ್ರತ್ಯಕ್ಷದರ್ಶಿ ಸಾಕ್ಷಿಯನ್ನು ಕರೆಸಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಲು ಆಗುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. KA-09-JK-1327 ವಾಹನ ನಮ್ಮ ಸಂಬಂಧಿಕರದ್ದು ಆಗಿರುತ್ತದೆ. ಅವರನ್ನು ಸಹಾ ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಬಹುದು ಎಂದರೆ ಅವರು ಬರುವುದಿಲ್ಲ. KA-09-JK-1327 ವಾಹನದ ಮಾಲೀಕರು ನಮ್ಮ ಸಂಬಂಧಿಕರಾಗಿರುವ ಕಾರಣ ಅವರಿಗೆ ತೊಂದರೆ ಆಗಬಾರದು ಎಂದು ಅವರನ್ನು

ಪಕ್ಷಕಾರರನ್ನಾಗಿ ಮಾಡದೇ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. KA-09-JH-0685 ವಾಹನದಿಂದ ಅಪಘಾತವಾಗಿದೆ ಎಂದು ಒಂದು ತಿಂಗಳ ನಂತರ ಸುಳ್ಳಾಗಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪತ್ನಿಯ ಅಂತಿಮ ಕಾರ್ಯಕ್ಕೆ 2 ಲಕ್ಷ ಮತ್ತು ವೈದ್ಯಕೀಯ ವೆಚ್ಚ 12 ಲಕ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.16 ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ.

6. ಅಪಘಾತವಾದಾಗ ನನ್ನ ಪತ್ನಿಗೆ 57 ವರ್ಷ ಆಗಿರಲಿಲ್ಲ ಅವರಿಗೆ 60 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿತ್ತು ಎಂದರೆ ಸರಿಯಲ್ಲ. ನನ್ನ ಪತ್ನಿ ಕೂಲಿ ಕೆಲಸ ಮಾಡಿ ತಿಂಗಳಿಗೆ 30 ಸಾವಿರ ಸಂಪಾದಿಸುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಒಬ್ಬ ಮಗ ಗಾರೆ ಕೆಲಸ ಮಾಡುತ್ತಾನೆ. ನಾನು ದಿನಕ್ಕೆ 500 ಸಂಪಾದಿಸುತ್ತೇನೆ. ನನ್ನ ಪತ್ನಿಯ ಸಂಪಾದನೆಯಿಂದ ಮನೆ ನಡೆಸುತ್ತಿರಲಿಲ್ಲ ನನ್ನ ಸಂಪಾದಯಿಂದ ನಡೆಸುತ್ತಿದ್ದೆನು ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**